ಪ್ರವೇಶಿಸಿ ಹಾಸಿಗೆಯ ಮೇಲುರುಳಿದವನಿಗೆ ನಿರಾಳವೆನಿಸಿತು. ತಾನು ಮಾತನಾಡಿದ್ದು ಸತ್ಯವಾದದ್ದು ಮತ್ತು ನ್ಯಾಯಯುತವಾದದ್ದೆಂದು ಅವನ ಒಳಮನಸ್ಸು ಹೇಳುತ್ತಿತ್ತು. ಎರಡು ಚಿಲ್ಡ್ ಬಿಯರನ್ನು ರೂಮಿಗೇ ತರಿಸಿ ಒಂದೇ ಗುಟುಕಿಗೆ ಅರ್ಧ ಗ್ಲಾಸು ಕುಡಿದವನಿಗೆ ಬಾಯಾರಿಕೆ ಇಂಗಿ, ದೇಹವೆಲ್ಲ ಒಂದು ಸ್ಥಾಯಿಗೆ ಬಂದ ಅನುಭವವಾಗಿತ್ತು. ಜಗತ್ತಿನಲ್ಲಿ ಕಣ್ಣಿಗೆ ಕಾಣುವುದು ಮಾತ್ರವೇ ಸತ್ಯ ಎಂದು ಸಮುದ್ರದ ಅಲೆಗಳು ಕೂಗಿದಂತೆ ಅನ್ನಿಸಿತು. ಹೌದು, ಸಮುದ್ರ ಸತ್ಯ, ಬೆಟ್ಟ ಗುಡ್ಡ ಸತ್ಯ, ನದಿ ಜಲಪಾತಗಳು ಸತ್ಯ, ಮರಗಿಡ ಪ್ರಾಣಿಗಳು ಸತ್ಯ, ಮನುಷ್ಯ ಸತ್ಯ, ಕುಡಿಯುತ್ತಿರುವ ಬಿಯರ್ ಸತ್ಯ, ತಿನ್ನುತ್ತಿರುವ ಫಿಶ್ ಫ್ರೈ ಸತ್ಯ, ಜೇಬಿನಲ್ಲಿರುವ ಹಣ ಸತ್ಯ. ಮತ್ತು ಕಣ್ಣಿಗೆ ಕಾಣದ್ದು ಯಾವುದೂ, ಯಾವೊತ್ತಿಗೂ ಸತ್ಯವಲ್ಲವೇ ಅಲ್ಲ! ಅರೆ, ಅಲ್ಲಮಪ್ರಭುವಿಗೆ ಗೋಕರ್ಣದ ರೆಸಾರ್ಟ್‌ನಲ್ಲಿ ಜ್ಞಾನೋದಯವಾಗಿತ್ತು ನೋಡಾ ಗುಹೇಶ್ವರಾ!

ಅಷ್ಟರಲ್ಲಿ ರೂಮಿನ ಬೆಲ್ ಸದ್ದಾಗಿತ್ತು. ಬೇರರ್ ಇರಬೇಕೆಂದು ''ಬನ್ನಿ...'' ಎಂದಿದ್ದ. ಆದರೆ, ಒಳಗೆ ಬಂದವರು ಬೇರೆ ವ್ಯಕ್ತಿಯಾಗಿದ್ದರು. ಸುಮಾರು ತನ್ನದೇ ವಯಸ್ಸು. ತಲೆ ತುಂಬಾ ಗುಂಗುರು ಕೂದಲು, ಹೋತದ ಗಡ್ಡ. ಘಮ್ಮನೆಯ ಸೆಂಟ್ ವಾಸನೆ ಗಪ್ಪನೆ ಮೂಗಿಗೆ ಬಡಿದಿತ್ತು. ''ಯಾರು ಬೇಕಿತ್ತು?'' ಮುಖದಲ್ಲಿ ಕುತೂಹಲ ತುಂಬಿಕೊಂಡು ಕೇಳಿದ್ದ ಅಲ್ಲಮಪ್ರಭು. ಜೊತೆಗೆ ಕೋಟಿತೀರ್ಥದಲ್ಲಿ ನಡೆದ ಘಟನೆಯಿಂದ ಮನಸ್ಸು ಸ್ವಲ್ಪ ವಿಹ್ವಲಗೊಂಡಿತ್ತು. ಬಂದ ವ್ಯಕ್ತಿ ಉತ್ತರಿಸುವ ಬದಲಾಗಿ, ''ನೀನು ವಾನಳ್ಳಿಯ ಅಲ್ಲಮಪ್ರಭು ಅಲ್ಲವಾ?...'' ಎಂದು ಕೇಳಿದ್ದ. ಆಶ್ಚರ್ಯವಾಗಿತ್ತು ಅಲ್ಲಮಪ್ರಭುವಿಗೆ. ''ಹೌದು, ತಾವು...'' ಎಂದವನಿಗೆ, ''ಅಯ್ಯೋ ರಾಸ್ಕಲ್, ನಾನು ಕಣೋ ಜಡ್ಡಿಗದ್ದೆ ಮಧುಕೇಶ್ವರ. ವಾನಳ್ಳಿಯ ಹೈಸ್ಕೂಲಿನಲ್ಲಿ ಎರಡೂವರೆ ವರ್ಷ ನಿನ್ನ ಕ್ಲಾಸ್ ಮೇಟ್. ಮಧ್ಯಾಹ್ನದ ಊಟಕ್ಕೆ ಎಷ್ಟು ಸಾರಿ ನನ್ನನ್ನು ನಿನ್ನ ಮನೆಗೆ ಕರೆದುಕೊಂಡು ಹೋಗಿರಲಿಲ್ಲ. ಮರೆತುಬಿಟ್ಟೆಯಾ...'' ಎಂದು ಟೀಪಾಯಿಯ ಎದುರಿನ ಸಿಂಗಲ್ ಸೋಫಾದ ಮೇಲೆ ಕುಳಿತಿದ್ದ. ''ಅರೆ, ಮಧುಕೇಶ್ವರ ನಿನ್ನ ಮರೆಯಲಿಕ್ಕುಂಟೇನೋ ಕೊಕ್ಕೊ ಚಾಂಪಿಯನ್. ಎಷ್ಟು ವರ್ಷ ಆಯ್ತು ಮಾರಾಯಾ, ಎಲ್ಲಿದ್ದೀಯ, ಏನು ಮಾಡ್ತಿದ್ದೀಯ...?'' ಎಂದು ಸಡಗರದಿಂದ ಒಂದೇ ಉಸುರಿಗೆ ಕೇಳಿದ ಅಲ್ಲಮಪ್ರಭು ರಿಸೆಪ್ಷನ್‌ಗೆ ಫೋನ್ ಮಾಡಿ ಮತ್ತೆರಡು ಬಿಯರ್, ಫಿಶ್ ಫ್ರೈಗೆ ಆರ್ಡರ್ ಮಾಡಿದ್ದ. ''ಭಟ್ಟರಿಗೆ ಸರಿಯಾಗಿ ಕ್ಲಾಸ್ ತಗೊಂಡೆ ನೋಡು, ನಾನೂ ಪಕ್ಕದಲ್ಲೇ ಪೂಜೆಗೆ ಕುಳಿತಿದ್ದೆ. ನೀನು ಎದ್ದು ನಿಂತು ಮಾತನಾಡಿದಾಗಲೇ ನಿನ್ನ ಗುರುತು ಸಿಕ್ಕಿದ್ದು ನನಗೆ. ಪೂಜೆಯ ಕೊನೆಯ ಭಾಗದಲ್ಲಿದ್ದೆ ನಾನು. ಹಾಗಾಗಿ ಮಾತನಾಡಲಾಗಲಿಲ್ಲ. ನನಗೂ ಇಂಥವುಗಳಲ್ಲಿ ನಂಬಿಕೆಯಿಲ್ಲ. ಆದರೆ, ಏನು ಮಾಡೋದು, ನಾನು ಮಾಡುತ್ತಿರುವ ಕೆಲಸ ಅಂಥಾದ್ದು. ವರ್ಷಕ್ಕೊಮ್ಮೆಯಾದರೂ ಇಲ್ಲಿಗೆ ಬಂದು ಪೂಜೆ ಮಾಡಿಸಿ ದೋಷ ಕಳೆದುಕೊಂಡು ಹೋಗ್ತೀನಿ, ಮನಸ್ಸಿನ ಸಮಾಧಾನಕ್ಕೆ. ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ವಿದ್ಯಮಾನ ಕೂಡ ಪೂರ್ವನಿರ್ಧರಿತವೇ ಎಂದು ಅನ್ನಿಸುತ್ತೆ ನನಗೆ. ಇನ್ನು ಕಣ್ಣಿಗೆ ಕಾಣದ ನಾವು ನಂಬುವ ಸಂಗತಿಗಳೆಲ್ಲಾ ಮೈಂಡ್ ಗೇಮ್ ಅಷ್ಟೆ. ನೀನು ಇಲ್ಲಿ ಉಳಿದುಕೊಂಡಿರುವ ಬಗ್ಗೆ ಮಹಾಬಲೇಶ್ವರ ಭಟ್ಟರೆ ನನಗೆ ಹೇಳಿದ್ದು. ನಾನೂ ಕೂಡಾ ಮೂರು ದಿನಗಳಿಂದ ಇಲ್ಲೇ ವಾಸ್ತವ್ಯ ಹೂಡಿರೋದು.'' ಎಂದು ಮಧುಕೇಶ್ವರನೂ ಗ್ಲಾಸಿಗೆ ಬಿಯರ್ ತುಂಬಿಕೊಂಡು ಕುಡಿಯತೊಡಗಿದ. ''ಹೌದು, ಹತ್ತನೆಯ ತರಗತಿಯಲ್ಲಿ ಅರ್ಧಕ್ಕೆ ಶಾಲೆ ಬಿಟ್ಟು ಹೋದವನು ಇವೊತ್ತು ಪ್ರತ್ಯಕ್ಷವಾಗಿದ್ದೀಯ. ಭೂಮಿ ಗುಂಡಗಿದೆ ಅನ್ನೋದಕ್ಕೆ ಇದಕ್ಕಿಂತಲೂ ನಿದರ್ಶನ ಬೇಕಾ? ನಾನಂತೂ ಊರಿನಲ್ಲೇ ಸೆಟ್ಲಾಗಿಬಿಟ್ಟಿದ್ದೀನಿ...'' ಗೋಕರ್ಣದ ಕೋಟಿತೀರ್ಥದ ಘಟನೆಯನ್ನು ಸಂಪೂರ್ಣವಾಗಿ ಮರೆತು ಗೆಳೆಯನ ಹತ್ತಿರ ಮಾತನಾಡತೊಡಗಿದ್ದ. ''ನೀನೇಪ್ಪ ಭಾರೀ ಆಸ್ತಿವಂತ. ನಮಗೇನಿತ್ತು ಊರಲ್ಲಿ, ಒಂದೆಕರೆ ಗದ್ದೆ. ಇಬ್ಬರು ಅಣ್ಣಂದಿರು. ಅಪ್ಪನ ಹತ್ತಿರ